20-12-1991 ರಂದು ನಿಧನರಾದರು. ಶ್ರೀಯುತರು 1950 ರಿಂದ 1952ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಸೇವೆ ಸಲ್ಲಿಸಿದ್ದರು. ಸ್ವಾತಂತ್ರ್ಯ ಸಂಗ್ರಾಮ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿ ಮುಂತಾದವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸುಮಾರು 6 ವರ್ಷಗಳಷ್ಟು ದೀರ್ಘ ಕಾಲ ಸೆರೆವಾಸವನ್ನು ಅನುಭವಿಸಿದ್ದ ಉನ್ನತ ರಾಷ್ಟ್ರಪ್ರೇಮಿ ಹಾಗೂ ಹಿರಿಯ ಗಾಂಧೀವಾದಿಗಳು ಶ್ರೀ ನಾರಾಯಣ ರಾವ್.

ಸಾಹಿತಿಯಾಗಿ, ಅಂಕಣಕಾರರಾಗಿ, ಸಮಾಜ ಸೇವಕರಾಗಿ, ಅತ್ಯಮೂಲ್ಯ ಸೇವೆ ಸಲ್ಲಿಸಿರುವ ಶ್ರೀಯುತರಿಗೆ ಅವರು ಬರೆದ "ಮಹಾತ್ಮರ ಮಾರ್ಗ" ಎಂಬ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸಲ ಲಭಿಸಿತ್ತು.

ನಿಧನ ಹೊಂದಿದ ಈ ಹಿರಿಯರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಒಂದು ನಿಮಿಷ ಮೌನ ಆಚರಿಸಿದರು)

(ಮೃತ ಸದಸ್ಯರ ಕುಟುಂಬದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾನ್ಯ ಏಕಾಂತಯ್ಯನವರು, ಮಾನ್ಯ ಪಿ.ಜಿ.ಆರ್. ಸಿಂಧ್ಯ ಅವರು ಎರಾಟಿಕ್ ಪವರ್ ಸಪ್ಲೈಯಿಂದಾಗಿ ರೈತರಿಗೆ, ಕೈಗಾರಿಕೆ ಮತ್ತು ಸಾಮಾನ್ಯ ಜನರಿಗೆ ತೊಂದರೆ ಆಗಿರುವ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆವು.

ಅಧ್ಯಕ್ಷರು : ಈಗ ಪ್ರಶ್ನೋತ್ತರದ ವೇಳೆ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರು ಹಳೆಯ ರೈಲ್ವೆ ನಿಲ್ದಾಣದ ಓವರ್ ಬ್ರಿಡ್ಜ್ ಹತ್ತಿರ ನಿರ್ಮಿಸುತ್ತಿರುವ ಮೋರಿಯ ನಿರ್ಮಾಣ.

42- ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹಳೆಯ ರೈಲ್ವೇ ನಿಲ್ದಾಣದ ಓವರ್ ಬ್ರಿಡ್ಜ್ ಹತ್ತಿರ ನಿರ್ಮಿಸುತ್ತಿರುವ ಮೋರಿಯ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಯಿತು?

ಆ) ಈ ಕಾಮಗಾರಿಯ ಅಂದಾಜು ವೆಚ್ಚವೆಷ್ಟು ಹಾಗೂ ವೆಚ್ಚ ಮಾಡಿರುವ ಹಣವೆಷ್ಟು?

ಇ) ಈ ಕಾಮಗಾರಿಯನ್ನು ಎಷ್ಟು ಅವಧಿಯೊಳಗೆ ಪೂರೈಸಲಾಗುವುದು?

ಈ) ಈ ಕಾಮಗಾರಿಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ರೈಲ್ವೆ ಅಧಿಕಾರಿಗಳೊಡನೆ ಪತ್ರ ವ್ಯವಹಾರ ನಡೆಸಲಾಗಿದೆಯೇ?

ಉ) ರೈಲ್ವೆ ಪ್ರವಾಸಿ ಮಂದಿರದ ಕಾಂಪೌಂಡಿನಲ್ಲಿ ನೇರವಾಗಿ ಸ್ಥಳವನ್ನು ಬಿಡಿಸಿಕೊಂಡಿದ್ದಲ್ಲಿ ಈ ಮೋರಿ ನಿರ್ಮಾಣದ ವೆಚ್ಚಕಡಿಮೆಯಾಗುತ್ತಿದ್ದದು ಸರ್ಕಾರದವರ ಗಮನಕ್ಕೆ ಬರಲಿಲ್ಲವೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):